ದಿನಾಂಕಃ**19-12-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**

ಪಾಟೀ ಸವಾಲುಃ **3** ನೇ ಎದುರುದಾರರ ಪರ ಶ್ರೀ ಜಿ ಪಿ ಎಲ್ ಪರವಾಗಿ ಕುಃ ಕೆ**.**ಎಸ್**.**ಕೆ**.**ವಕೀಲರಿಂದಃ

ದಿನಾಂಕ 28.07.2023 ರಂದು ಅಪಘಾತ ಆಗಿರುತ್ತದೆ. ಆ ದಿನ ನಾನು ಸ್ಕೂಟರ್ ಸಂಖ್ಯೆ ಕೆಎ-21-ವಿ-479 ಅನ್ನು ಚಲಾಯಿಸಿಕೊಂಡು ಬರುತ್ತಿದ್ದೆನು. ನನಗೆ ಚಲಾನ ಪರವಾನಿಗೆ ಪತ್ರ ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ದಿನ ನಾನು ಮನೆಯಿಂದ ಕದ್ರಿ ಪಾರ್ಕ್ ಕಡೆಗೆ ಹೋಗುತ್ತಿದ್ದೆನು. ಆ ದಿನ ಕಾರು ನನ್ನ ಬೈಕ್ ನ ಹಿಂದೆ ಬರುತ್ತಾ ಇತ್ತು. ಅಪಘಾತ ಆದ ಸ್ಥಳವು ಕದ್ರಿ ಸ್ಟೇಷನ್ ಎದುರುಗಡೆ ಇರುತ್ತದೆ. ಆ ದಿನ ಕಾರನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಸದರಿ ಕಾರು ಚಲಾಕನಿಗೆ ಚಾಲನಾ ಪರವಾನಿಗೆ ಪತ್ರ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ಅಪಘಾತ ಆದ ನಂತರ ನಾನು ಮೊದಲು Thejaswini ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಸದರಿ ಆಸ್ಪತ್ರೆಯಲ್ಲಿ ವೈಧ್ಯಧಿಕಾರಿಗೆ ಅಪಘಾತದ ಬಗ್ಗೆ ತಿಳಿಸಿರುತ್ತೇನೆ. ನಾನು ಸದರಿ ಆಸ್ಪತೆಯಲ್ಲಿ 15 ದಿನಗಳ ಕಾಲಒಳ ರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ವೈಧ್ಯಕೀಯ ವೆಚ್ಚಕ್ಕೆ ರೂ 2 ಲಕ್ಷ ಖರ್ಚು ಆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತ ಆಗುವ ಕಾಲಕ್ಕೆ ನನಗೆ 47 ವರ್ಷ ವಯಸ್ಸು ಇರುತ್ತದೆ. ಅಪಘಾತ ಆಗುವ ಪೂರ್ವಕ್ಕೆ ನಾನು ಪಂಚಾಯಿತಿ ಕಛೇರಿಯಲ್ಲಿ ಅಟೇಂಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ನನಗೆ ಮಾಸಿಕ ರೂ.31,000/- ಸಾವಿರ ವೇತನ ಇತ್ತು ಇದರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ಅಪಘಾತ ನಂತರ ದೂರನ್ನು ಪೊಲೀಸರಿಗೆ ನಾನೇ ನೀಡಿರುತ್ತೇನೆ. ಅಪಘಾತದಿಂದ ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಅಪಘಾತ ಪೂರ್ವದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದೆನೋ ಈಗಲೂ ಸಹ ಅದೇ ರೀತಿ ಮಾಡುತ್ತಾ ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದ ಅಪಘಾತ ಆದ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಎದುರುದಾರ 1 ಮತ್ತು 2 ಏಕ ಪಕ್ಷೀಯ ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಓ

Sd/-xxx

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ**.**ರಾ**.**ಪುರ**,**
ಸಂಚಾರಿ ನ್ಯಾಯಾಲಯ**,** ಕೊಪ್ಪ**.**

ಸಾಕ್ಷಿದಾರರ ಸಹಿಃ